ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 09ನೇ ಮಾರ್ಚ್, 2020

ಉತ್ತರ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದಿಂದ ನಿಯಮ ಬಾಹಿರವಾಗಿ ಮಾಡಲಾಗಿರುವ ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರ ನಿಯೋಜನೆ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) -

72 (558) ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ದಿನಾಂಕ: 19-1-2019ರ ಪತ್ರ ಸಂಖ್ಯೆ:ಕಾಶಿಇ:353 ಯೋಜನೆ 2018-19ರಲ್ಲಿ ಸಹ/ಸಹಾಯಕ ಪ್ರಾಧ್ಯಾಪಕರು/ಭೋದಕೇತರರನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ನಿಯೋಜನೆ ಮಾಡಿರುವುದು ನಿಜವೇ ; ಮಾಡಿದ್ದಲ್ಲಿ, ಎಷ್ಟು ಜನರನ್ನು ಮಾಡಲಾಗಿದೆ ; ಅದಕ್ಕೆ ಕಾರಣಗಳೇನು ;

(ಆ) ಸದರಿಯವರುಗಳ ನೇಮಕಾತಿ ದಿನಾಂಕ ಹಾಗೂ ಹುದ್ದೆ ಯಾವುದು ; ಅವರನ್ನು ಎಲ್ಲಿಂದ ಎಲ್ಲಿಗೆ ವರ್ಗಾವಣೆ ಮಾಡಲಾಗಿದೆ ; ಅವರ ಹೆಸರು ಮತ್ತು ಹುದ್ದೆಗಳೇನು ;

(ಇ) ಈ ನಿಯೋಜನೆ ಮಾಡಿದ್ದರಿಂದ ಉತ್ತರ ಕರ್ನಾಟಕದ ಮಕ್ಕಳಿಗೆ ಶಿಕ್ಷಕರಿಲ್ಲದೆ ಅವರು ಶಿಕ್ಷಣದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಉತ್ತರ ಕರ್ನಾಟಕದಲ್ಲಿ ನೇಮಕಾತಿಯಾಗಿ ಮೈಸೂರು ಬೆಂಗಳೂರಿಗೆ ನಿಯೋಜನೆ ಮಾಡುವುದು ಅನ್ಯಾಯವಲ್ಲವೆ ; 100ಕ್ಕೆ 90ರಷ್ಟು ಮೈಸೂರು ಬೆಂಗಳೂರಿಗೆ ನಿಯೋಜನೆ ಮಾಡಿ ಉತ್ತರ ಕರ್ನಾಟಕದ ಮಕ್ಕಳಿಗೆ ಆಗುತ್ತಿರುವ ಈ ತಾರತಮ್ಯವನ್ನು ಹೋಗಲಾಡಿಸಲು ಸಾಧ್ಯವೆ ; ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?